ಯಾಗಿ ಏನನ್ನೂ ಕೋರಬೇಡಿ. ನಿಮ್ಮ ಸ್ಥಿತಿ ಯಾವಾಗಲೂ ಕೊಡುವವನದಾಗಿರಲಿ. ನಿಮ್ಮ ಪ್ರೀತಿಯನ್ನು ದೇವರಿಗೆ ಕೊಡಿ. ಆದರೆ ಅವನಿಂದ ಏನನ್ನೂ ಆಶಿಸಬೇಡಿ." ಎರಡನೆಯ ಲಕ್ಷಣವೆಂದರೆ, **ಪ್ರೀತಿಗೆ ಅಂಜಿಕೆಯಿಲ್ಲ** ಎಂಬುದು. ಶಿಕ್ಷೆಯ ಭಯದಿಂದ ದೇವರನ್ನು ಪ್ರೀತಿಸುವುದು ಅತ್ಯಂತ ಹೀನವಾದುದು. ನೈಜಪ್ರೇಮವು ಎಲ್ಲ ಅಂಜಿಕೆಯನ್ನೂ ಜಯಿಸುತ್ತದೆ. ಮೂರನೆಯ ಲಕ್ಷಣವೆಂದರೆ, **ಪ್ರೇಮಕ್ಕೆ ಯಾವ ಸ್ಪರ್ಧೆಯೂ ಇಲ್ಲ** ಎನ್ನುವುದು. ಪ್ರೀತಿಸುವವನಿಗೆ ಅವನು ಪ್ರೀತಿಸುವ ವಸ್ತುವೇ ಶ್ರೇಷ್ಠತಮ ಆದರ್ಶವಾಗಿರುತ್ತದೆ. ಎಲ್ಲ ವರ್ಗದ ಜನರ ಶ್ರೇಷ್ಠತಮ ಆದರ್ಶವೇ ದೇವರು. ಹೀಗೆ ಇಲ್ಲಿ ಯಾವ ಬಗೆಯ ಸ್ಪರ್ಧೆಗೂ ಅವಕಾಶವಿಲ್ಲ.

**ಪ್ರೇಮದ ಆದರ್ಶವಾಗಿ ಭಗವಂತ:** ಸ್ವಾಮೀಜಿ ಇಲ್ಲಿ ಆದರ್ಶದ ಬಗ್ಗೆ ಕೆಲವು ಮಾತುಗಳನ್ನು ಹೇಳುತ್ತಾರೆ. ಯಾವುದು ಅಂತರಾಳದಲ್ಲಿದೆಯೋ, ಅದೇ ಹೊರಗೆ ಬರುವುದಕ್ಕೆ ನೂಕುತ್ತಿರುತ್ತದೆ. ಹಾಗೆಯೇ ಆದರ್ಶವೂ ಕೂಡ. ಅಂತಹ ಆದರ್ಶದ ಪೂರ್ಣ ಪ್ರಕಟಣೆ ಬಾಹ್ಯಜಗತ್ತಿನಲ್ಲಿ ಸಾಧ್ಯವಿಲ್ಲ ಎಂಬುದನ್ನು ಮನುಷ್ಯನು ಕ್ರಮೇಣ ಅರಿಯುವನು. ಅನಂತರ ಆ ಆದರ್ಶವನ್ನು ಬಾಹ್ಯಜಗತ್ತಿನ ಮೇಲೆ ಆರೋಪಿಸುವುದನ್ನು ಬಿಟ್ಟು, ಪರಾಪ್ರೇಮದ ದೃಷ್ಟಿಯಿಂದ ಆದರ್ಶವನ್ನು ಆದರ್ಶಕ್ಕಾಗಿಯೇ ಪ್ರೀತಿಸುವುದನ್ನು ಕಲಿಯುವನು. ಅವನೇ ಶ್ರೇಷ್ಠ ಭಕ್ತ. ಅಂತಹ ಭಕ್ತ ದೇವರಿಗೆ ಹೇಳುತ್ತಾನೆ, **"ನನ್ನ ಸರ್ವಸ್ವವನ್ನೂ ನಿನಗೆ ಅರ್ಪಿಸುತ್ತೇನೆ. ನಿನ್ನಿಂದ ನನಗೆ ಏನೂ ಬೇಕಾಗಿಲ್ಲ. ನನ್ನದು ಎಂದು ಹೇಳಿಕೊಳ್ಳುವುದಕ್ಕೆ ನಿಜವಾಗಿ ನನ್ನಲ್ಲಿ ಏನೂ ಇಲ್ಲ"** ಎಂದು. ಸ್ವಾಮಿ ವಿವೇಕಾನಂದರ ಪ್ರಕಾರ, ಇದೇ ಭಕ್ತಿಯ ಪರಾಕಾಷ್ಠತೆ. ವಿಶ್ವದಲ್ಲಿರುವ ಪ್ರತಿಯೊಂದು ವಸ್ತುವೂ ಭಗವಂತನಿಂದ ಬಂದಿದೆ. ಅವೆಲ್ಲವೂ ನಮ್ಮ ಪ್ರೀತಿಗೆ ಯೋಗ್ಯವಾಗಿವೆ. ಸಮಷ್ಟಿಪ್ರೇಮದಲ್ಲಿ ವ್ಯಷ್ಟಿಪ್ರೇಮವು ಅಡಗಿದೆ. ಈ ಸಮಷ್ಟಿಯೇ ದೇವರು. ಇಂತಹ ಪ್ರೇಮವನ್ನು ಪಡೆದ ಭಕ್ತನು ದೇವರನ್ನು ಎಲ್ಲೆಲ್ಲಿಯೂ ನೋಡುವನು.


**ಪ್ರೇಮಾದರ್ಶದ ಮಾನವೀಯ ಪ್ರಕಟಣೆ:** ಪರಾಭಕ್ತಿಯ ಭಾವನೆಯನ್ನು ಮಾನವಭಾಷೆಯಲ್ಲಿ ವ್ಯಕ್ತಪಡಿಸುವುದು ಅಸಾಧ್ಯ. ಆದರೆ ಅಂತಹ ಮಾನವ ಭಾವನೆಗಳ ಮೂಲಕ ಮಾತ್ರವೇ ಒಬ್ಬ ವ್ಯಕ್ತಿಯು ಭಗವಂತನ ಬಗ್ಗೆ ಆಲೋಚಿಸಬಲ್ಲ. ಹಾಗೆಂದೇ ಪರಾಭಕ್ತಿಯ ವಿಷಯವಾಗಿ ವಿವರಿಸಿದ ಆಚಾರ್ಯರು ಪರಾಪ್ರೇಮವನ್ನು ಹಲವು ಮಾನವೀಯ ಭಾವಗಳಲ್ಲಿ ಅನುಭವಿಸಿ ಅರಿತುಕೊಳ್ಳಲು ಪ್ರಯತ್ನಪಟ್ಟಿದ್ದಾರೆ.ಅವು ಹೀಗಿವೆ: **೧. ಶಾಂತ** : ಇಲ್ಲಿ ಉದ್ವೇಗವಿಲ್ಲ; ಉನ್ಮತ್ತತೆಯಿಲ್ಲ. ಶಾಂತ ಭಕ್ತನು ನಿರುದ್ವೇಗಿಯೂ, ಸಮಾಧಾನ ಚಿತ್ತನೂ, ಮೃದುಸ್ವಭಾವದವನೂ ಆಗಿರುತ್ತಾನೆ. **೨. ದಾಸ್ಯ:** ಇಲ್ಲಿ ಭಕ್ತನು ತನ್ನನ್ನು ಭಗವಂತನ ದಾಸ ಎಂದು ಭಾವಿಸುತ್ತಾನೆ. **೩. ಸಖ್ಯ :** ಒಬ್ಬ ವ್ಯಕ್ತಿ ತನ್ನ ಸ್ನೇಹಿತನೊಡನೆ ಸಮಾನಭಾವನೆ ಹೊಂದಿರುತ್ತಾನೆ. ಈ ರೀತಿ, ಭಗವಂತನೊಡನೆ ಸ್ನೇಹಭಾವವನ್ನು ಬೆಳೆಸಿಕೊಳ್ಳುವುದೇ ಸಖ್ಯಭಾವ. ಆಗ ದೇವರು ನಮಗೆ ಅತ್ಯಂತ ಸಮೀಪದವನಾಗುತ್ತಾನೆ. ಅವನಲ್ಲಿ ನಾವು ನಮ್ಮ ಜೀವನದ ದುಃಖಗಳನ್ನೆಲ್ಲ ಹೇಳಿಕೊಳ್ಳಬಹುದು. **೪. ವಾತ್ಸಲ್ಯಭಾವ:** ಈ ಸ್ಥಿತಿಯಲ್ಲಿ ಭಕ್ತನು ಭಗವಂತನನ್ನು ಮಗುವಂತೆ ಭಾವಿಸುತ್ತಾನೆ. ಮಗುವಿನ ಸ್ಥಿತಿಯೆಂದರೆ ಯಾವಾಗಲೂ ಸ್ವೀಕರಿಸುವುದು; ತಾಯಿಯ ಗುಣ ಯಾವಾಗಲೂ ನೀಡುತ್ತಿರುವುದು, ತ್ಯಾಗ ಮನೋಭಾವ. ಹಾಗೆಂದೇ ದೇವರನ್ನು ಮಗುವಂತೆ ಪ್ರೀತಿಸಬೇಕು ಎಂದು ಹೇಳುವರು. **೫. ಮಧುರಭಾವ:** ಇದು ಭಾವಗಳಲ್ಲೆಲ್ಲ ಶ್ರೇಷ್ಠವಾದ ಭಾವ. ಇದು ಗಂಡ–ಹೆಂಡಿರ ಮಧ್ಯೆ, ಪ್ರಿಯತಮ–ಪ್ರಿಯತಮೆಯರ ನಡುವೆ ಇರುವ ಬಾಂಧವ್ಯವನ್ನು ಸೂಚಿಸುತ್ತದೆ. ಸ್ವಾಮೀಜಿ ಇದರ ಬಗ್ಗೆ ಹೀಗೆ ಹೇಳುತ್ತಾರೆ: "ಮಧುರ ಭಾವದಲ್ಲಿ ದೇವರೇ ನಮ್ಮ ಪ್ರಿಯತಮನಾಗುವನು. ನಾವೆಲ್ಲ ಸ್ತ್ರೀಯರು, ಪ್ರಪಂಚದಲ್ಲಿ ಪುರುಷರಾರೂ ಇಲ್ಲ. ಇರುವವನೊಬ್ಬನೇ ಪುರುಷ. ಅವನು ನಮ್ಮ ಪ್ರಿಯತಮ. ಸ್ತ್ರೀಯು ಯಾವ ಪ್ರೀತಿಯನ್ನು ಪುರುಷನಿಗೆ ಕೊಡುವಳೋ ಅದನ್ನೇ ಎಲ್ಲ ರೀತಿಯಿಂದಲೂ ನಾವು ದೇವರಿಗೆ ಕೊಡಬೇಕಾಗಿದೆ."

**ಎಲ್ಲ ಭಾವನೆಗಳಿಗೂ ದೇವರೇ ಉದ್ದೇಶವಾಗಬೇಕು:** ಪ್ರಪಂಚದಲ್ಲಿ ನಮ್ಮ ಕಣ್ಣಿಗೆ ಬೀಳುವ ಬಗೆಬಗೆಯ ಪ್ರೇಮಗಳೆಲ್ಲ ಕೇವಲ ನಟನೆ. ಭಕ್ತನಾದವನ ಪ್ರೀತಿ, ಕೋಪ ಮತ್ತು ತಾಪಗಳಿಗೆಲ್ಲ ದೇವರೊಬ್ಬನೇ ಗುರಿ. ಸ್ವಾಮೀಜಿ ತಮ್ಮ ಹೃದಯಂಗಮವಾದ ಮಾತುಗಳಲ್ಲಿ ಈ ಅಂಶವನ್ನು ಹೀಗೆ ವ್ಯಕ್ತಪಡಿಸುತ್ತಾರೆ:

**"ಎಲ್ಲ ಬಗೆಯ ಪ್ರೇಮ, ಮಾನವ ಹೃದಯದಲ್ಲಿರುವ ಕಾಮವೆಲ್ಲ ದೇವರಡಿಗೆ ಹೋಗಬೇಕು. ಅವನೇ ನಮ್ಮ ಪ್ರಿಯತಮ. ಮಾನವ ಹೃದಯ ಮತ್ತಾವುದನ್ನು ತಾನೇ ಪ್ರೀತಿಸಬಲ್ಲುದು? ಅವನಷ್ಟು ಸುಂದರವಾಗಿ ಯಾರೂ ಇಲ್ಲ. ಅವನೇ ರೂಪುವೆತ್ತ ಸೌಂದರ್ಯ. ಅವನೇ ರೂಪುವೆತ್ತ ಭವ್ಯತೆ... ಅವನೇ ಪತಿಯಾಗಲಿ, ಅವನೇ ಪ್ರಿಯತಮನಾಗಲಿ."**

ಪರಾಭಕ್ತಿಯ ಪ್ರೇಮದ ತೀವ್ರತೆ ಎಷ್ಟೆಂದರೆ, ಇದು ಎಲ್ಲ ಬಗೆಯ ಮಾನವ ಕಾಮನೆಗಳನ್ನೂ ಮೀರಿಹೋಗುವುದು. ಗೋಪಿಯರಲ್ಲಿ ಇಂಥ ಪ್ರೇಮೋತ್ಕರ್ಷವನ್ನು ಕಾಣುತ್ತೇವೆ. ಹಾಗೆಂದೇ ಸ್ವಾಮೀಜಿ ಉದ್ಗರಿಸುತ್ತಾರೆ:

**"ಹೇ ಮಾನವ, ನೀನು ಪರಾಭಕ್ತಿಯನ್ನು ಕುರಿತು ಮಾತನಾಡುವೆ. ಜೊತೆಗೆ ಕೆಲಸಕ್ಕೆ ಬಾರದ ಪ್ರಾಪಂಚಿಕ ವ್ಯವಹಾರದಲ್ಲಿಯೂ ನಿರತನಾಗಿರುವೆ. ಇದು ಹೇಗೆ ಸಾಧ್ಯ? 'ರಾಮನಿರುವ ಕಡೆ ಕಾಮಕ್ಕೆ ಎಡೆಯಿಲ್ಲ. ಕಾಮವಿರುವ ಕಡೆ ರಾಮನಿಗೆ ಎಡೆ ಇಲ್ಲ' ಅವೆಂದಿಗೂ ಕತ್ತಲೆ ಬೆಳಕಂತೆ ಒಟ್ಟಿಗೆ ನಿಲ್ಲಲಾರವು. "**




# ಕಾಕ ಜಾತಕ

**(ಜಾತಕ ಕಥೆಗಳ ಕಕಂಟಕ ವಗ್ಗದ ೧೪೬ನೆ ಜಾತಕ)**

**ಈ** ಜಾತಕ ಕತೆಯನ್ನು ಬುದ್ಧನು ಜೇತವನದಲ್ಲಿದ್ದಾಗ ಅತಿ ವೃದ್ಧರಾದ ಕೆಲವು ಭಿಕ್ಷುಗಳ ವಿಷಯದಲ್ಲಿ ಹೇಳಿದನು. ಆ ಭಿಕ್ಷುಗಳು ಹಿಂದೆ ಗೃಹಸ್ಥಧರ್ಮವನ್ನು ಪಾಲಿಸುತ್ತಿದ್ದಾಗ ಶ್ರಾವಸ್ತಿಯ ಶ್ರೀಮಂತ ಮನೆತನಕ್ಕೆ ಸೇರಿದವರಾಗಿದ್ದರು. ಅವರೆಲ್ಲ ಪರಸ್ಪರ ಸ್ನೇಹಿತರಾಗಿದ್ದರು. ಎಲ್ಲರೂ ಸೇರಿ ಪುಣ್ಯ ಕರ್ಮಗಳನ್ನು ಮಾಡುತ್ತಿದ್ದರು. ಬುದ್ಧನ ಉಪದೇಶವನ್ನು ಕೇಳಿ ಅವರಿಗೆ ತಾವು ಮುದುಕರಾಗುತ್ತಿರುವುದರ ಪ್ರಜ್ಞೆ ಬಂದಿತು; ಹೀಗಾಗಿ ಸಂಸಾರವನ್ನು ತ್ಯಜಿಸಿ ಬುದ್ಧನ ಬಳಿ ಇದ್ದು ಅವನ ಉಪದೇಶದಂತೆ ಉಳಿದ ಜೀವನವನ್ನು ಸವೆಸಿ ದುಃಖವನ್ನು ಅಂತ್ಯಗೊಳಿಸಬೇಕೆಂಬುದಾಗಿ ಅವರೆಲ್ಲ ನಿಶ್ಚಯಿಸಿದರು. ತಮ್ಮ ಸಂಪತ್ತೆಲ್ಲವನ್ನೂ ತಮ್ಮ ಮಕ್ಕಳಿಗೆ ಕೊಟ್ಟು, ಅವರು ದುಃಖದಿಂದ ಅಳುತ್ತಿರುವಂತೆಯೇ ಅವರನ್ನು ತೊರೆದು, ಬುದ್ಧನಿಂದ ಪಬ್ಬಜ್ಜವನ್ನು (ಪಬ್ಬಜ್ಜ = ಸಂನ್ಯಾಸ) ಬೇಡಿ ಪಬ್ಬಜಿತರಾದರು. ಆದರೆ ಅವರಿಗೆ ಅದಾಗಲೇ ವಯಸ್ಸಾಗಿದ್ದರಿಂದ ಪಬ್ಬಜ್ಜಧರ್ಮಕ್ಕನುಗುಣವಾಗಿ ಶ್ರಮಣ ಜೀವನವನ್ನು ನಡೆಸಲಾಗಲಿಲ್ಲ. ಗೃಹಸ್ಥರಾಗಿದ್ದಾಗ ಹೇಗಿದ್ದರೋ ಪಬ್ಬಜಿತರಾದ ಮೇಲೂ ವಿಹಾರದ ಒಂದು ಮೂಲೆಯಲ್ಲಿ ಪರ್ಣಶಾಲೆಯನ್ನು ನಿರ್ಮಿಸಿಕೊಂಡು, ಜೊತೆ ಜೊತೆಗೇ ವಾಸಿಸುತ್ತಿದ್ದರು. ಭಿಕ್ಷೆ ಬೇಡಲು ಕೂಡ ಧರ್ಮದ ನಿಯಮದಂತೆ ಬೇರೆಯವರ ಮನೆಗೆ ಹೋಗದೆ, ತಮ್ಮ ಮಕ್ಕಳ ಮನೆಗೇ ಹೋಗಿ ಅಲ್ಲಿಯೇ ಊಟ ಮಾಡುತ್ತಿದ್ದರು.

ಅವರಲ್ಲಿ ಒಬ್ಬನ ಮೊದಲನೆಯ ಹೆಂಡತಿ ಎಲ್ಲ ವೃದ್ಧ ಭಿಕ್ಷುಗಳಿಗೂ ಉಪಕಾರ ಮಾಡುವ ಸ್ವಭಾವದವಳಾಗಿದ್ದಳು. ಆದ್ದರಿಂದ ಭಿಕ್ಷೆಯಲ್ಲಿ ಉಳಿದುದೆಲ್ಲವನ್ನೂ ತೆಗೆದುಕೊಂಡು ಆಕೆಯ ಮನೆಗೇ ಬಂದು ಎಲ್ಲರೂ ಊಟ ಮಾಡುತ್ತಿದ್ದರು. ಆಕೆ ಸಹ ತನ್ನಲ್ಲಿದ್ದ ವಿವಿಧ ವ್ಯಂಜನ ಭಕ್ಷ್ಯಗಳನ್ನು ಎಲ್ಲರಿಗೂ ನೀಡುತ್ತಿದ್ದಳು. ಒಂದು ದಿನ ಯಾವುದೋ ಕಾಯಿಲೆಯಿಂದ ಆಕೆಯು ಸತ್ತುಹೋದಳು. ಆ ಮುದಿ ಭಿಕ್ಷುಗಳು ವಿಹಾರಕ್ಕೆ ಬಂದು ಪರಸ್ಪರ ಆಲಿಂಗಿಸಿಕೊಂಡು, “ಮಧುರ ರಸಭೋಜನವನ್ನು ನೀಡುತ್ತಿದ್ದ ಉಪಾಸಿಕೆ ಸತ್ತುಹೋದಳು” ಎಂದು ಹೇಳಿಕೊಂಡು ಅಳುತ್ತಿದ್ದರು. ಅವರ ಆ ಗೋಳನ್ನು ಕೇಳಿ ಎಲ್ಲ ಕಡೆಯಿಂದ ಭಿಕ್ಷುಗಳು ಓಡಿಬಂದು ಕೇಳಿದರು, “ಆಯುಷ್ಮಂತರೇ! ಏಕೆ ಶೋಕಿಸುತ್ತಿರುವಿರಿ?” ಅವರಲ್ಲಿ ಒಬ್ಬ ಹೀಗೆ ಹೇಳಿದ: “ನನ್ನ ಸ್ನೇಹಿತನ ಮೊದಲ ಹೆಂಡತಿ ಸತ್ತು ಹೋದಳು. ಅವಳ ಕೈರುಚಿ ಚೆನ್ನಾಗಿತ್ತು. ಅವಳು ನಮಗೆ ಬಹಳ ಉಪಕಾರ ಮಾಡುತ್ತಿದ್ದಳು. ಇನ್ನು ಇಂಥ ಹೆಂಗಸು ಎಲ್ಲಿ ತಾನೇ ಸಿಗುತ್ತಾಳೆ?”

ಉಳಿದ ಭಿಕ್ಷುಗಳು, ಧರ್ಮಸಭೆಯಲ್ಲಿ ಈ ವೃದ್ಧಭಿಕ್ಷುಗಳು ಅಳುತ್ತಿದ್ದುದನ್ನೂ, ಅದರ ಕಾರಣವನ್ನೂ ಕುರಿತು ಪರಸ್ಪರ ಮಾತನಾಡಿಕೊಳ್ಳುತ್ತಿದ್ದರು. ಆಗ ಬುದ್ಧನು ಆ ಸಭೆಗೆ ಪ್ರವೇಶಮಾಡಿ ಯಾವ ವಿಷಯವನ್ನು ಕುರಿತು ಚರ್ಚೆ ಮಾಡುತ್ತಿರುವಿರೆಂದು ಕೇಳಿದನು. ಭಿಕ್ಷುಗಳು ಈ ವಿಷಯವನ್ನು ಅವನಿಗೆ ತಿಳಿಸಿದರು. “ಭಿಕ್ಷುಗಳೇ! ಇವರು ಈಗ ಮಾತ್ರ ಆಕೆ ಸತ್ತಾಗ ಅಳುತ್ತಿರುವುದಿಲ್ಲ. ಹಿಂದೆಯೂ ಆಕೆ ಕಾಗೆಯಾಗಿ ಹುಟ್ಟಿ ಸಮುದ್ರದಲ್ಲಿ ಮುಳುಗಿ ಸತ್ತಾಗ, ಸಮುದ್ರದ ನೀರನ್ನು ಹೊರಚೆಲ್ಲಿ ಅವಳನ್ನು ಆಚೆಗೆ ತರುತ್ತೇವೆ ಎಂದು ಈ